ಅ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ?

ಇ) ಹಣಕಾಸಿನ ಸೌಲಭ್ಯಗಳನ್ನು ಯಾವ ಆಧಾರದ ಮೇಲೆ ಈ ಮಹಾನಗರಸಭೆಗೆ ವಿತರಣೆ ಮಾಡಲಾಗುತ್ತಿದೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಜಕಾತಿ ರದ್ದತಿಯ ಪರಿಹಾರ ಧನವನ್ನು ಹೊರತಾಗಿ ಹುಬ್ಬಳ್ಳಿ–ಧಾರವಾಡ, ಮಹಾನಗರ ಪಾಲಿಕೆಗೆ ಯಾವ ಸಹಾಯ ಧನವನ್ನೂ ನೀಡುತ್ತಿಲ್ಲ.

ಚಿಕ್ಕೋಡಿ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ

೬೯೯. ಶ್ರೀಮತಿ ಶಕುಂತಲಾ ಟಿ. ಚೌಗಲಿ (ಚಿಕ್ಕೋಡಿ) ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕೋಡಿ ಪಟ್ಟಣಕ್ಕೆ ಅಭಿವೃದ್ಧಿ ನೀರು ಸರಬರಾಜು ಯೋಜನೆಯ ಅಂದಾಜನ್ನು ೯೦.೦೦ ಲಕ್ಷಗಳಿಗೆ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ ೨೮–೧೧–೮೭ ರಂದು ನೀಡಿದ್ದು ನಿಜವೇ ?

ಆ) ಈ ಯೋಜನೆಯು ನಗರ ನೀರು ಸರಬರಾಜು ಯೋಜನೆಗಳ ಅಡಿಯಲ್ಲಿ ಬರುವುದರಿಂದ ಚಿಕ್ಕೋಡಿ ಪುರಸಭೆಯ ಈ ಯೋಜನೆಯ ಪೂರ್ಣ ವೆಚ್ಚವನ್ನು ಜಲಮಂಡಲಿಗೆ ಭರಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಯೋಜನೆಯ ೩/೧ನೇ ಭಾಗವನ್ನು ಅಂದರೆ ೩೦ ಲಕ್ಷ ರೂಪಾಯಿಗಳನ್ನು ಪುರಸಭೆಯು ಮಂಡಲಿಗೆ ಭರಿಸಲು ಕೇಳಿದ್ದಾರೆ ಚಿಕ್ಕೋಡಿಯಂತಹ ಹಿಂದುಳಿದ ಪುರಸಭೆಯಿಂದ ೩೦ ಲಕ್ಷ ರೂಪಾಯಿಗಳನ್ನು ಭರಿಸಲು ಸಾಧ್ಯವಿಲ್ಲವೆಂದು ಆ ಹಣವನ್ನು ಸರ್ಕಾರವು ಸಾಲದ ರೂಪದಲ್ಲಿ ಭರಿಸಬೇಕೆಂದು ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರವು ೩೦ ಲಕ್ಷ ರೂ ಸಾಲವನ್ನು ಮಂಜೂರು ಮಾಡಿ ಚಿಕ್ಕೋಡಿ ನಾಗರೀಕರ ನೀರಿನ ಭವಣೆಯನ್ನು ನೀಗಿಸುವುದೆ ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು.

ಇ) ಹೌದು.

ಈ) ಪರಿಶೀಲಿಸಲಾಗುತ್ತಿದೆ.

ಪುರಸಭೆ, ನಗರಸಭೆ, ಮಹಾನಗರಸಭೆ ಚುನಾವಣೆ ನಡೆಸುವ ಬಗ್ಗೆ

೭೨೨. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪುರಸಭೆ ಮತ್ತು ಮಹಾನಗರಸಭೆಗಳ ಚುನಾವಣೆಗಳನ್ನು ಮುಂದೂಡಲು ಕಾರಣವೇನು ?

ಆ) ಈ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು ?

ಇ) ಹಾಲಿ ಪುರಸಭೆ/ನಗರಸಭೆಗಳಿಗೆ ಆಡಳಿತ ಮಂಡಲಿ ನೇಮಿಸುವ ವಿಚಾರವೇನಾದರೂ ಇದೆಯೆ ?